ಎಂದು ರವಿಕೆಯನ್ನು ಅಷ್ಟು ಹೊತ್ತೂ ಬಿಚ್ಚಿಡುವ ಸಂಗತಿ, ಹೆಣ್ಣು ಧರಿಸುವ ಬ್ಲೌಸ್‌ನ ವಿನ್ಯಾಸವನ್ನೂ ನಿಯಂತ್ರಿಸಲು ಹರ ಸಾಹಸ ಪಡುವ ಗಂಡಾಳಿಕೆ, ಮುಂದಿನ ಜನ್ಮದಲ್ಲಿ ಹೆಣ್ಣುಮಕ್ಕಳ ಬ್ಲೌಸ್ ಹೊಲಿಯುವ ದರ್ಜಿಯಾಗಬೇಕು ಎಂದು ಹಂಬಲಿಸಿದ ಕನ್ನಡದ ಚಿಂತಕರೊಬ್ಬರ ನೆನಪು... ಕಲೆಯೇ ನಿನ್ನಯ ಗುಣವೇ...



ಸುರೇಖಾ

ಜೀವಂತ ಹೂವಿನ ತೇರಿನಂತೆ, ಹೆಣ್ಣು ಇಡಿಯಾಗಿ ಹೂವಿನಲ್ಲಿ ಮುಚ್ಚಿಹೋಗಿರುವ ಮೂರು ಚಿತ್ರಗಳಿವೆ. ಮೈಸೂರಿನ ಅರಸರ ಪ್ರತಿಮೆಯ ಎದುರಿಗೆ ನಿಂತ ಹೆಣ್ಣು ಲೋಕದ ಎದುರಿಗೆ ತನ್ನನ್ನು ಸರಕಾಗಿ, ಭೋಗದ ವಸ್ತುವಾಗಿ ಮಾತ್ರ ನೋಡುವುದಕ್ಕೆ ಮಾದರಿಯಾಗಿ ಕಾಣುತ್ತಲೇ ತನ್ನನ್ನು ಸೌಂದರ್ಯದ, ಲೋಕದ ಕಣ್ಣಿಗೆ ಕಾಣದಂತೆ ತನ್ನನ್ನು ತನ್ನದೇ ಆದ ಸೌಂದರ್ಯಾವರಣದಲ್ಲಿ ಕಾಪಾಡಿಕೊಳ್ಳುವ ಹವಣಾಗಿ, ಲೋಕ ಹೇಗೆ ಬೇಕಾದರೂ ನೋಡಿಕೊಳ್ಳಲಿ, ತನ್ನ ಒಳಲೋಕದಲ್ಲಿ ತನ್ನ ಪಾಡಿಗೆ ತಾನು ಇರುವಂತೆಯೂ ಕಾಣಿಸುತ್ತದೆ.

ಏನು ಮಾಡಿಯೂ ಲೋಕ ನಾಶ ಮಾಡಲಾಗದ ಹೆಣ್ಣಿನ ಸೌಂದರ್ಯಾನುಭೂತಿಯನ್ನೂ ಇದು ಹೇಳುತ್ತಿರಬಹುದೆ? ಅಥವಾ ಇದನ್ನು ನಾನು ನೋಡುತ್ತಿರುವ ಬಗೆಯಲ್ಲಿಯೇ ಮಿತಿಯಿದೆಯೆ? ಇನ್ನೊಂದರಲ್ಲಿ, ಮೆಟ್ಟಿಲಿನ ಮೇಲೆ ಕೂತ ಹೆಣ್ಣು ಪ್ರಕೃತಿಯ ಜೊತೆ ತನ್ನನ್ನು ಸಮೀಕರಿಸಿಕೊಳ್ಳಲು ನಡೆಸುತ್ತಿರುವ ಪ್ರಯತ್ನವಾಗಿಯೂ ಕಾಣಿಸುತ್ತದೆ. ಕೋಟೆಯೊಂದರ ಹಿನ್ನೆಲೆಯಲ್ಲಿನ ಹೆಣ್ಣು ಇನ್ನೊಂದು ಆಯಾಮದಲ್ಲಿ ಯಾವುದಕ್ಕೂ ತನ್ನನ್ನು ಹೊಂದಿಸಿಕೊಳ್ಳಬಲ್ಲ ಹೆಣ್ಣಿನ ಚಿತ್ರವಾಗಿ ಕಾಣಿಸುತ್ತದೆ.

ಈ ಚಿತ್ರಗಳ ಪಕ್ಕದಲ್ಲಿ ಇಡಬಹುದಾದ ಮತ್ತೆರಡು ಕಲಾಕೃತಿಗಳಿವೆ. 'ಲೇಡಿ ಅಂಬೇಡ್ಕರ್' ಎನ್ನಬಹುದಾದ ಚಿತ್ರವಂತೂ ಅಪೂರ್ವವಾದ ಧ್ವನಿಶಕ್ತಿಯ ಕವಿತೆಯಂತೆ ಭಾಸವಾಗುತ್ತದೆ. ಅಂಬೇಡ್ಕರ್‌ರಂತೆ ಕೈಯೆತ್ತಿ ನಿಂತ, ಕಪ್ಪು ಬಟ್ಟೆ ಧರಿಸಿದ ಹೆಣ್ಣುಮಗಳ ಮುಖ ಕಾಣಿಸದ ಹಿಮ್ಮುಖ ಚಿತ್ರ ಅದು. ಅತ್ಯಾಧುನಿಕ ಬಟ್ಟೆ ಧರಿಸಿ ಮೊಗ್ಗಿನ ಜಡೆ ಹಾಕಿಕೊಂಡ ಈ ಹೆಣ್ಣುಮಗಳು ವಿಲಕ್ಷಣವಾಗಿ ಕಾಣಿಸುತ್ತಿರುವಾಗಲೇ ಆ ಎತ್ತಿದ ಕೈ ಅಂಬೇಡ್ಕರ್ ಅವರ ಹೆಣ್ಣನ್ನು ಕುರಿತ ನಿಲುವನ್ನು ತಾನು ನಿಂತ ಭಂಗಿಯಲ್ಲಿಯೇ ಘನವಾಗಿ ಘೋಷಿಸುತ್ತದೆ. ಅವರ ಆಶಯ, ತನ್ನ ಆಶಯವೂ ಆಗಿದ್ದಾಗಲೂ ಸ್ಥಾಪಿತ ನೆಲೆಗಳು ಮತ್ತು ಬಿಡುಗಡೆಯ ದಾರಿಗಳ ನಡುವಿನ ಹೆಣ್ಣಿನ ಹೊಯ್ದಾಟವನ್ನು, ಅದರ ವಾಸ್ತವಿಕ ಸಂಘರ್ಷಗಳನ್ನು ಅವಳು ಸೂಚಿಸುತ್ತಿದ್ದಾಳೆ ಎನ್ನಿಸುತ್ತದೆ. ಅಂಬೇಡ್ಕರ್ ಇದ್ದಾರೆ ಹೆಣ್ಣಿನಲ್ಲಿ ನಿಜ, ಆದರೆ ಆ ಎತ್ತಿದ ಕೈನ ಜೊತೆಯಲ್ಲಿಯೇ ಮೊಗ್ಗಿನ ಜಡೆಯೂ ಇದ್ದೇ ಇದೆ. ಅದು ಬೇಕೋ ಬೇಡವೋ? ಇದಕ್ಕೆ ಉತ್ತರ ಹೆಣ್ಣಿನಲ್ಲೇ ಇಲ್ಲ. ಏಕೆಂದರೆ, ಬೇಕು ಬೇಡಗಳ ನಡುವೆ ಒಂದನ್ನು ಆರಿಸಿಕೊಳ್ಳುವುದು ಸಾಧ್ಯವಿಲ್ಲ. ಹೆಣ್ಣಿನ ಈ ದ್ವಂದ್ವ ಅಂದಿನದ್ದೂ ಹೌದು, ಇಂದಿನದ್ದೂ ಹೌದು. ಕಾನೂನು, ಸಂವಿಧಾನ ಎಲ್ಲವೂ ಇದೆ ಹೆಣ್ಣಿನ



ಹಲವು ಚಾಚುಗಳ 'ಲೇಡಿ ಅಂಬೇಡ್ಕರ್'

ಪರವಾಗಿ, ತನಗೆ ಬೇಕಾದ ಬದುಕು ಯಾವುದು ಎನ್ನುವುದೂ ಅವಳಿಗೆ ಗೊತ್ತಿದೆ. ಆದರೆ ಈ ತನಕ ನಡೆದ ದಾರಿಯನ್ನು ಸಂಪೂರ್ಣವಾಗಿ ಬದಲಿಸಿಬಿಡುವುದು ಯಾಕೆ ಸಾಧ್ಯವಾಗುತ್ತಿಲ್ಲ? ಹಿಂದಿನದರ ಸೆಳೆತ, ಇಂದಿನದರ ಮೊರೆತ — ಹೆಣ್ಣಲ್ಲದ, ಹೆಣ್ಣಾಗಲೊಲ್ಲದ ಗಂಡಿಗೆ ಇದು ಎಂದಾದರೂ ಅರ್ಥವಾದೀತೆ?

ಇದರ ಮುಂದುವರಿಕೆಯಂತೆ, ಮತ್ತೊಂದು



'ಎ ಮೊಮೆಂಟ್ ಆಫ್ ಸ್ಟ್ರೇಂಜ್ ಸ್ಟಿಲ್‌ನೆಸ್' ಕಲಾಕೃತಿ